Sri KADIDAL MANJAPPA.—The matter is under investigation .

ಶ್ರೀ ಟಿ. ಎಸ್. ವೆಂಕಟಲಗಿರಿಗೌಡ.—ಈ ಕಾರ್ಯಕ್ರಮದ ಬಗ್ಗೆ ಅಲ್ಲಿಯ ರೈತರು ತಮ್ಮ ಭಾಗದ ಕಂಟ್ರಿಬ್ಯೂಷನ್ ಕೊಡಲು ಮುಚ್ಚಳಿಕೆಯನ್ನು ಬರೆದುಕೊಟ್ಟರೆ ಈ ಕೆಲಸವನ್ನು ತೆಗೆದುಕೊಳ್ಳುವ ವಿಚಾರದಲ್ಲಿ ಸರ್ಕಾರದ ಅಭಿಪ್ರಾಯವೇನು ?

ಶ್ರೀ ಕಡಿದಾಳ್ ಮಂಜಪ್ಪ.—ಅದನ್ನು ಯೋಚನೆ ಮಾಡುತ್ತೇವೆ.

Tarring Chandapur-Anekal Road in Anekal Taluk.

9-30 A.M.

Q.—588. Srimathi LAKSHMI-DEVI RAMANNA (Hoskote-Anekal).—

Will the Government be pleased to state :—

(*a*) whether an estimate has been prepared for tarring Chandapur-Anekal Road in Anekal Taluk ;

(*b*) if so, what the estimated amount is ;

(*c*) whether the work of tarring will be undertaken from this year ?

A.—Sri KADIDAL MANJAPPA (Minister for Revenue and Public Works).—

(*a*) Yes.
(*b*) Rs. 85,500.
(*c*) Will be considered.

ಶ್ರೀಮತಿ ಲಕ್ಷ್ಮೀದೇವಿ ರಾಮಣ್ಣ.—ಅಂದಾಜು ತಯಾರುಮಾಡಿದ್ದು ಯಾವಾಗ ?

ಶ್ರೀ ಕಡಿದಾಳ್ ಮಂಜಪ್ಪ.—ನೋಟೀಸ್ ಬೇಕು.

ಶ್ರೀಮತಿ ಲಕ್ಷ್ಮೀದೇವಿ ರಾಮಣ್ಣ.—ಅಂದಾಜು ಆಗಿದೆ ಎಂದು ಉತ್ತರಕೊಟ್ಟಿದ್ದೀರಿ!

ಶ್ರೀ ಕಡಿದಾಳ್ ಮಂಜಪ್ಪ.—ಅಂದಾಜು ಆಗಿದೆ. ಯಾವ ವರ್ಷ ಆದದ್ದು ಎಂದು ರೆಫರೆನ್ಸ್ ಸಿಕ್ಕುವುದಿಲ್ಲ, ಆದ್ದರಿಂದ ಹೇಳುವುದಕ್ಕಾಗುವುದಿಲ್ಲ.

ಶ್ರೀಮತಿ ಲಕ್ಷ್ಮೀದೇವಿ ರಾಮಣ್ಣ.—ಈ ರೆಕ್ಕಾಟಾರದ ಪ್ರಕಾರ ಮೈಲಿಗೆ ಸುಮಾರು ಟಾರ್‌ಮಾಡುವುದಕ್ಕೆ 10½ ಸಾವಿರ ರೂಪಾಯಿಗಳು ಖರ್ಚಾಗುತ್ತದೆ ಎಂದು ಆಯಿತು. ಇದು ಬಹಳ ಹಿಂದೆ ಆದದ್ದು ಎಂದು ಕೇಳುತ್ತೇನೆ. ಅಂದಾಜು ಪುನರ್‌ವಿಮರ್ಶೆಮಾಡಬೇಕಾಗಿ ಬರುತ್ತದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಪುನರ್‌ವಿಮರ್ಶೆಮಾಡಬೇಕಾದ ಸಂದರ್ಭ ಬರಬಹುದು.

ಶ್ರೀಮತಿ ಲಕ್ಷ್ಮೀದೇವಿ ರಾಮಣ್ಣ.—ಅಂದಾಜು ಮಂಜೂರಾದದ್ದು ಹಿಂದೆ ಆದದ್ದೇ ?

ಶ್ರೀ ಕಡಿದಾಳ್ ಮಂಜಪ್ಪ.—ಮಂಜೂರಾಗಿಲ್ಲ. ಅದು ಸರ್ಕಾರದವರಿಗೆ ಇನ್ನೂ ಬಂದಿಲ್ಲ. ಸೂಪರಿಂಟೆಂಡಿಂಗ್ ಇಂಜನಿಯರ ಹತ್ತಿರ ಇದೆ.

ಶ್ರೀಮತಿ ಲಕ್ಷ್ಮೀದೇವಿ ರಾಮಣ್ಣ.—ಅನೇಕಲ್ ಮಾರ್ಗದಲ್ಲಿ ರೈಲ್ವೇ ಸೌಕರ್ಯ ಇಲ್ಲದೇ ಇರುವುದರಿಂದ ನೂರಾರು ಬಸ್ಸುಗಳು ಈ ರಸ್ತೆಯಲ್ಲಿ ಓಡಾಡಿ ರಸ್ತೆ ಬಹಳ ಶಿಥಿಲವಾಗಿರುವುದು ಗೊತ್ತೇ ?

ಶ್ರೀ ಕಡಿದಾಳ್ ಮಂಜಪ್ಪ.—ತಾವೇ ಅದನ್ನು ನನ್ನ ಗಮನಕ್ಕೆ ತಂದಿದ್ದೀರಿ.

ಶ್ರೀಮತಿ ಲಕ್ಷ್ಮೀದೇವಿ ರಾಮಣ್ಣ.—ಈ ವರ್ಷ ಜಾಗ್ರತೆ ಮಂಜೂರುಮಾಡಿ ಕಾರ್ಯ ಕೈಕೊಳ್ಳರಾಗುತ್ತದೆ ಎಂಬ ಭರವಸೆ ಕೊಡುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಸಾಧ್ಯವಾದರೆ ನೋಡೋಣ. ಹೆಚ್ಚು ಹೆಚ್ಚು ಭರವಸೆ ಕೊಡುವುದಕ್ಕಾಗುವುದಿಲ್ಲ. ಇದಕ್ಕೆ ಬಡ್ಜೆಟ್ಟಿನಲ್ಲಿ ಪ್ರೊವೈಡ್ ಮಾಡಿಲ್ಲ. ಯೋಚನೆ ಮಾಡುತ್ತೇವೆ.

Widening the bridges near Gudemaranahalli, Belagumba and Magadi.

Q.—616. Sri S. SIDDAPPA (Magadi).—

Will the Government be pleased to state :—

whether they would consider the question of widening the bridges that are situated near Gudemaranahalli, Belagumba and Magadi ?

A.—Sri KADIDAL MANJAPPA (Minister for Revenue and Public Works).—

The proposal is under consideration.

ಶ್ರೀ ಎಸ್. ಸಿದ್ದಪ್ಪ.—ಉತ್ತರದಲ್ಲಿ ಪರ್ಯಾಲೋಚನೆಯಲ್ಲಿದೆ ಎಂದು ತಮ್ಮ ಅಪ್ಪಣೆಯಾಗಿದೆ. ಯಾವಾಗ ಕೈಕೊಳ್ಳುತ್ತೀರಿ, ಸ್ವಾಮಿ ?

ಶ್ರೀ ಕಡಿದಾಳ್ ಮಂಜಪ್ಪ.—ಅಂದಾಜನ್ನು ತಯಾರುಮಾಡುತ್ತಾ ಇದ್ದಾರೆ.

ಶ್ರೀ ಎಸ್. ಸಿದ್ದಪ್ಪ.—ಇದುವರೆಗೂ ಅಂದಾಜು ತಯಾರಾಗಿಲ್ಲವೇ ?

ಶ್ರೀ ಕಡಿದಾಳ್ ಮಂಜಪ್ಪ.—ಇಲ್ಲ.

ಶ್ರೀ ಎಸ್. ಸಿದ್ದಪ್ಪ.—ಹಾಗಾದರೆ ತಯಾರುಮಾಡುವುದಕ್ಕೆ ಎಷ್ಟುಕಾಲ ಹಿಡಿಯುತ್ತದೆ ?

ಶ್ರೀ ಕಡಿದಾಳ್ ಮಂಜಪ್ಪ.—ಎಷ್ಟು ಕಾಲ ಅವಶ್ಯಕವೋ ಅಷ್ಟುಕಾಲ ಬೇಕಾಗುತ್ತದೆ.

ಶ್ರೀ ಎಸ್. ಸಿದ್ದಪ್ಪ.—ಹಾಗಾದರೆ, ಇದು ಬಹಳ ಅವಶ್ಯಕವಾದದ್ದು, ಸೇತುವೆಮಾಡದೇ ಇದ್ದರೆ ಜನ ಜಾನುವಾರುಗಳಿಗೆ, ಸಂಚಾರಸೌಕರ್ಯ ಅತಿ ಮುಖ್ಯವಾಗಿರತಕ್ಕ ಬಸ್ಸುಗಳಿಗೆ, ಅಪಾಯವಾಗುತ್ತದೆ ಎಂಬುದು ಗೊತ್ತೇ?

ಶ್ರೀ ಕಡಿದಾಳ್ ಮಂಜಪ್ಪ.—ಅದಕ್ಕೇ ಅಂದಾಜು ತಯಾರುಮಾಡತಕ್ಕದ್ದು.